Register Number:

Date: 17-11-2020

ST. JOSEPH'S COLLEGE ( AUTONOMOUS) BENGALURU – 560027

B.A. III rd. SEMESTER EXAMINATION NOVEMBER – 2020

## KAA 318 - KANNADA

Time : 2-30 hrs. Max. Marks : 70

This paper contains 2 printed pages and four parts

I. ಅ) ಒಂದರ ಭಾವಾರ್ಥವನ್ನು ಬರೆಯಿರಿ . 1X 5=5

1) ಗಿಡಗಂಟೆಯಾ ಕೊರಳೊಳಗಿಂದ
ಹಕ್ಕಿಗಳಾ ಹಾಡು
ಹೊರಟಿತು ಹಕ್ಕಿಗಳಾ – ಹಾಡು
ಗಂಧರ್ವರಾ ಸೀಮೆಯಾಯಿತು
ಕಾಡಿನಾ ನಾಡು
ಕ್ಷಣದೊಳು – ಕಾಡಿನಾ ನಾಡು.

2) ಮಿರುಗುಬಣ್ಣಕೆ ಬೆರೆತು, ಭಯಮರೆತು, ಕೊಬ್ಬಿದೆನು;
ಮೆರೆದಾಯ್ತು; ನೆನೆಯದಿರು ಹಿಂದಿನದೆಲ್ಲ.
ಇಷ್ಟು ದಿನ ಸಲಹಿರುವೆ ಮೂರ್ಖನನು; ಮುಂದೆಯೂ
ಕೈಹಿಡಿದು ನಡೆಸದಿಹೆಯಾ?

ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ. 3X 5 = 15

3) ಒಳಗೆ ಹೊರಗೆ ಏಕವಾಗಿ ಸೋರುತಿಹುದು
4) ಸರ್ವಲೋಕ ಭಯಂಕರನ್ ಆ ಮಹೇಂದ್ರಾರಿ !
5) ಎನ್ನ ಕೈ ಹಿಡಿದವರು ಇವಳ ಕೈಯನು ಹಿಡಿದು ಸಾಕಲಾರರೆ?
6) ಇದು ಬರಿ ಬೆಳಗಲ್ಲೋ ಅಣ್ಣಾ !
7) ಇರುಳು ಕತ್ತಲೆಯ ಗವಿ. ಮನೆ ದೂರ
8) ಕೊಟ್ಟ ಭಾಷೆಗೆ ತಪ್ಪಲಾರೆನು

II. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾಗಿ ಉತ್ತರ ಬರೆಯಿರಿ. 2 X10 = 20

9) ಪ್ರಾರ್ಥನೆ ಕವಿತೆಯ ಮುಖ್ಯ ಸಂದೇಶವನ್ನು ವಿವರಿಸಿ.
10) ಬೇಂದ್ರೆಯವರ 'ಬೆಳಗು' ಹೇಗೆ ಒಂದು ಉತ್ತಮ ಪ್ರಕೃತಿಗೀತೆಯಾಗಿದೆಯೇ ? ಸಮರ್ಥಿಸಿ.
11) 'ಮದಲಿಂಗನಕಣಿವೆ' – ಒಂದು ದುರಂತ ಕವನವೆ ? ವಿಶ್ಲೇಷಿಸಿ.
12) ಗೋವಿನ ಹಾಡಿನಲ್ಲಿ ವ್ಯಕ್ತವಾದ ಸತ್ಯ ನಿಷ್ಠತೆಯ ಮೌಲ್ಯವನ್ನು ವಿವರಿಸಿ.

III. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ . 2 X10 = 20

13) ದೇವರ ಕಲ್ಪನೆಯು ಮಾನವನ, ಲೌಕಿಕ ಅನುಭವದ ಮೇಲೆ ನಿಂತಿದೆಯೆಂಬುದನ್ನು ಶಿವರಾಮ ಕಾರಂತರು ಹೇಗೆ ಸಮರ್ಥಿಸಿದ್ದಾರೆ ?

14) ಲಿಂಗ ತಾರತಮ್ಯದ ಸ್ವರೂಪದ ಕುರಿತು ಎಚ್.ಎಸ್.ಶ್ರೀಮತಿಯವರ ನಿಲುವುಗಳನ್ನು ವಿಶದೀಕರಿಸಿ.

15) 'ಅದೃಷ್ಟ ನಂಬಿ ಬದುಕುವುದಕ್ಕಿಂತ ಪ್ರಾಮಾಣಿಕ ಪ್ರಯತ್ನದಿಂದಲೇ ಯಶಸ್ಸು ಸಾಧ್ಯ' – ನೇಮಿಚಂದ್ರ ಅವರ ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

16) ಎಚ್ ನರಸಿಂಯ್ಯನವರು ಪ್ರತಿಪಾದಿಸಿದ ವೈಚಾರಿಕತೆಯ ಕುರಿತು ಬರೆಯಿರಿ

IV. ಒಂದು ವಾಕ್ಯದಲ್ಲಿ ಉತ್ತರಿಸಿ. 1X10= 10

17) ಸೇವಾ ವಲಯದಲ್ಲಿ ನೆಲಸುವ ಆದೇಶವನ್ನು ಯಾರಿಗೆ ನೀಡಲಾಗುತ್ತದೆ?

18) ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ ಯಾವುದನ್ನು ಗುರಿಯಾಗಿಸಿಕೊಂಡಿದೆ?

19) ಇಂದ್ರನ ಮಾಯಾಜಾಲಕ್ಕೆ ಬಲಿಯಾದ ಕನ್ಯೆ ಯಾರು?

20) ಧರ್ಮ ಸಾಮಾನ್ಯವಾಗಿ ಯಾವ ವಾಣಿಯಿಂದ ಮಾತನಾಡುತ್ತದೆ ?

21) ಸತ್ಯಶೋಧನೆಗೆ ಯಾವ ಮಾರ್ಗ ಸರಿಯಾದುದು?

22) ವೈಜ್ಞಾನಿಕ ಮನೋಭಾವ ಮತ್ತು ಮಾನವೀಯ ಮೌಲ್ಯಗಳು ಯಾವುದರ ಅಂಗಗಳಾಗಬೇಕು?

23) ಬಿಂಬ ಎಂದರೇನು ?

24) ದರ್ಶನ ಎಂದರೇನು?

25) ನಮ್ಮ ಭಾವನೆಗಳ ಅಡಿಗಲ್ಲು ಯಾವುದು?

26) ನೇಮಿಚಂದ್ರ ಅವರು ರಚಿಸಿರುವ ಲೇಖನ ಯಾವುದು?

---

KAA 318_B_20